

ಸ್ತರವನ್ನು ಅನಾವರಣಗೊಳಿಸಿದ್ದಾನೆ. ಜೈನಕಾವ್ಯಗಳಲ್ಲಿ ವೈರಾಗ್ಯಕ್ಕೆ ಕಾರಣವಾಗುವ ಸಾಮಾನ್ಯ ಸಂಗತಿಗಳನ್ನು ಬಿಟ್ಟು ಒಂದು ಅತಿಶಯವಾದ ನಿದರ್ಶನವನ್ನು ಸೃಷ್ಟಿಸಿದ್ದಾನೆ.

ಭರತ–ಬಾಹುಬಲಿಯ ಸಂಘರ್ಷ ಆದಿಪುರಾಣದಲ್ಲಿ ಬರುವ ಮಹತ್ವದ ಸನ್ನಿವೇಶಗಳಲ್ಲಿ ಒಂದು. ಅಷ್ಟೆ ಅಲ್ಲ, ಪಂಪನ ಲೌಕಿಕ ದೃಷ್ಟಿಕೋನಕ್ಕೆ ಉತ್ತಮ ನಿದರ್ಶನವಾಗಿದೆ. ಆಗಮಿಕ ಪ್ರಜ್ಞೆಯುಳ್ಳ ಮಹಾಕಾವ್ಯದೊಳಗೆ ಲೋಕಾನುಭವದ ವ್ಯಾಪ್ತಿಯುಳ್ಳ ಒಂದು ಪ್ರಸಂಗವನ್ನು ಹೆಣೆದಿರುವುದು ಪಂಪನ ಹೆಗ್ಗಳಿಕೆ.

ವೃಷಭನಾಥ ಭರತನಿಗೆ ರಾಜ್ಯಾಭಿಷೇಕ ಮಾಡಿ ವೈರಾಗ್ಯ ಪರನಾಗುತ್ತಾನೆ. ತನ್ನ ಆಯುಧಾಗಾರದಲ್ಲಿ ಹುಟ್ಟಿದ ಚಕ್ರರತ್ನವನ್ನು ಮುಂದಿಟ್ಟುಕೊಂಡು ಭರತ ಭೂಮಂಡಲ ದಿಗ್ವಿಜಯವನ್ನು ಪ್ರಾರಂಭಿಸುತ್ತಾನೆ. ಷಟ್ಖಂಡ ಮಂಡಲವನ್ನು ಗೆದ್ದ ಭರತ ತನ್ನ ಕೀರ್ತಿಶಾಸನವನ್ನು ಕೆತ್ತಿಸಲು ವೃಷಭಾಚಲಕ್ಕೆ ಬರುತ್ತಾನೆ. ಅದರ ಮಧ್ಯಭಾಗದ ಗೋಡೆಗಳಲ್ಲಿ ತನ್ನ ದಿಗ್ವಿಜಯದ ಪ್ರಶಸ್ತಿಯನ್ನು ಬರೆಯಿಸುವೆನೆಂದು ಹೋಗಿ ನೋಡುತ್ತಾನೆ:

ಆದರೊಳನೇಕ ಕಲ್ಪಶತಕೋಟಿಗಳೊಳ್ ಸಲೆಸಂದ ಚಕ್ರಿ ವೃಂ
ದದ ಛಲದಾಯದಾಯತಿಯ ಚಾಗದ ಬೀರದ ಮಾತುಗಳ್ ಪೊದ
ಳ್ದೊದವಿರೆ ತತ್ಪ್ರಶಸ್ತಿಗಳೊಳಂತವನೊಯ್ಯನೆ ನೋಡಿ ನೋಡಿ ಸೋ
ರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರ ಚರ್ಕವರ್ತಿಯ

ಅಲ್ಲಿ ಪ್ರಖ್ಯಾತರಾದ ಚಕ್ರಿಗಳ ಕೀರ್ತಿಶಾಸನಗಳು ಬರೆಯಲ್ಪಟ್ಟಿದ್ದು, ಎಲ್ಲಿ ನೋಡಿದರೂ ಸ್ಥಳಾವಕಾಶವಿರಲಿಲ್ಲ. ನಾನೇ ಮೊದಲ ಚರ್ಕವರ್ತಿ ಎಂದುಕೊಂಡಿದ್ದ ಭರತನಲ್ಲಿ ಮಡುಗಟ್ಟಿದ್ದ ಗರ್ವರಸ ಸೋರಿಹೋಯಿತು; ಲಜ್ಜೆಯಿಂದ ತಲೆತಗ್ಗಿಸುತ್ತಾನೆ. ಆದರೂ, ಅಹಂಕಾರದಿಂದ ಹಿಂದಿನ ರಾಜರ ಪ್ರಶಸ್ತಿಗಳಲ್ಲಿ ಒಂದನ್ನು ತನ್ನ ರತ್ನದಂಡದಿಂದ ಒರೆಸಿ ಹಾಕಿ ತನ್ನ ಪ್ರಶಸ್ತಿಯನ್ನು ಬರೆಯಿಸುತ್ತಾನೆ.

ಅನಂತರ ಭರತ ಅಯೋಧ್ಯೆಗೆ ಹಿಂತಿರುಗುತ್ತಾನೆ. ಚಕ್ರರತ್ನ ಅಯೋಧ್ಯೆಯನ್ನು ಪ್ರವೇಶಿಸದೆ ನಿಲ್ಲುತ್ತದೆ. ಪುರೋಹಿತರನ್ನು ಕರೆದು ಚಕ್ರರತ್ನದ ಗತಿಭಂಗಕ್ಕೆ ಕಾರಣವೇನೆಂದು ಕೇಳುತ್ತಾನೆ. ಆಗ